ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ESTD-1964 (ಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

**ಊಟಿ ರಸ್ತೆ, ಮೈಸೂರು - 570 025**

☎: 0821-2548236 & 2548380 Fax: 0821-2548238 E-mail: jssautonomous@gmail.com www. jsscacs.edu.in


ದಿನಾಂಕ: 02.10.2017

## ಪ್ರಕಟಣೆಯ ಕೃಪೆಗಾಗಿ

### "ಜಗತ್ತು ಕಂಡ ಬಹುಮುಖ ವ್ಯಕ್ತಿತ್ವದ ಶ್ರೇಷ್ಠ ನಾಯಕ–ಮಹಾತ್ಮ ಗಾಂಧೀಜಿ"

–ಡಾ. ಎಂ.ಜಿ. ಬಸವರಾಜ

ದಿನಾಂಕ ೦೨.೧೦.೨೦೧೭ ರಂದು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಹಾಗೂ ಅಂತಾರಾಷ್ಟ್ರೀಯ ಅಹಿಂಸಾ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ನಿವೃತ್ತ ಅರ್ಥಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಎಂ.ಜಿ. ಬಸವರಾಜ ಅವರು ಮಾತನಾಡುತ್ತಾ –"ಗಾಂಧೀಜಿ ಜಗತ್ತಿನ ಶ್ರೇಷ್ಠ ವ್ಯಕ್ತಿ. ಕಾನೂನು ತಜ್ಞರು, ರಾಜ್ಯಶಾಸ್ತ್ರ ತಜ್ಞರು, ಅರ್ಥಶಾಸ್ತ್ರ ತಜ್ಞರು, ಸಮಾಜಶಾಸ್ತ್ರ ತಜ್ಞರು, ಶಿಕ್ಷಣ ತಜ್ಞರು, ವೈದ್ಯ ತಜ್ಞರು ಆಗಿ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ತಮ್ಮ ವಿಚಾರಗಳನ್ನು ಕಟ್ಟಿ ಆ ಮೂಲಕ ಸುಂದರ ಸಮಾಜದ ಕನಸನ್ನು ಕಂಡ ಜಗತ್ತಿನ ಬಹುಮುಖವ್ಯಕ್ತಿತ್ವದ ನಾಯಕ ಮಹಾತ್ಮ ಗಾಂಧೀಜಿ" ಎಂದು ನೆನೆದರು. ಅವರ 'ಅಂತ್ಯೋದಯದ ಮೂಲಕ ಸರ್ವೋದಯ ಕಲ್ಪನೆ', ನಿಸರ್ಗ ಚಿಕಿತ್ಸೆ, ಮೂಲಶಿಕ್ಷಣ ನೀತಿ, ಆದರ್ಶ ಗ್ರಾಮ ಕಲ್ಪನೆ, ಸಹಕಾರ ಪಶು ಸಂಗೋಪನೆ ಬೇಸಾಯ ಮುಂತಾದ ವಿಚಾರಗಳು ಇಂದಿನ ಸಮಾಜದಲ್ಲಿಯೂ ಪ್ರಸ್ತುತೆಯನ್ನು ಪಡೆದುಕೊಂಡಿವೆ" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯ ವಹಿಸಿದ್ದ ಮಹಾರಾಷ್ಟ್ರದ ಪಿಐಎಂಎಸ್ ಡೀಮ್ಡ್ ವಿಶ್ವವಿದ್ಯಾಲಯದ ಸಮ ಕುಲಾಧಿಪತಿಗಳಾದ ಪ್ರೊ. ವೈ.ಎಂ. ಜಯರಾಜ್ ಅವರು "ಗಾಂಧೀಜಿ ಅವರ ಜೀವನದ ಮೂರು ಮುಖ್ಯ ಹಂತಗಳಾದ ಬಾಲ್ಯ, ವಕೀಲವೃತ್ತಿ, ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ಚರಿತ್ರೆಗಳು – ಇವುಗಳು ಭವ್ಯಭಾರತಕ್ಕೆ ಮಾರ್ಗದರ್ಶನವಾಗಿವೆ. ಸತ್ಯದ ಪ್ರತಿಪಾದನೆಯೊಂದಿಗೆ ಅಧಿಕಾರಕ್ಕೆ ಆತುರೆಯದ ವ್ಯಕ್ತಿತ್ವ ಗಾಂಧೀಜಿಯವರು. ಕೌಟುಂಬಿಕ ಜೀವನದಲ್ಲಿ ಸಾಕಷ್ಟು ನೋವು ಅನುಭವಿಸಿದ ಗಾಂಧೀಜಿಯವರು ಭಾರತದ ಸ್ವಾತಂತ್ರ್ಯಕ್ಕಾಗಿ ಕೌಟುಂಬಿಕ ಸುಖವನ್ನು ತ್ಯಜಿಸಿದರು. ಗಾಂಧೀಜಿಯವರ ಇಂತಹ ನಿಸ್ವಾರ್ಥದ ಸೇವೆ ಇಂದಿನ ಸಮಾಜಕ್ಕೆ ಮಾದರಿಯಾಗಬೇಕು" ಎಂದು ಆಶಿಸಿದರು.

ಕಾಲೇಜಿನ ಮುಖ್ಯಕಾರ್ಯನಿರ್ವಾಹಕರಾದ ಪ್ರೊ.ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಪ್ರೊ.ಎಂ. ಮಹದೇವಪ್ಪ ಉಪಸ್ಥಿತರಿದ್ದರು. ಅರ್ಥಶಾಸ್ತ್ರ ವಿಭಾಗದ ಪ್ರೊ. ಡಿ.ಎಸ್. ಸದಾಶಿವಮೂರ್ತಿ ಎಲ್ಲರನ್ನೂ ಸ್ವಾಗತಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ.ಎಸ್. ಸೋಮಶೇಖರ ಅವರು ವಂದಿಸಿದರು. ಪ್ರೊ. ಪಿ.ಎಂ. ಮಹದೇವಸ್ವಾಮಿ ಅವರು ಕಾರ್ಯಕ್ರಮ ನಿರೂಪಿಸಿದರು.

ಗೆ,

ಸಂಪಾದಕರು

____________________

____________________

(ಪ್ರೊ. ಎಂ. ಮಹದೇವಪ್ಪ)
ಪ್ರಾಂಶುಪಾಲರು

ಪ್ರಾಂಶುಪಾಲರು
ಜೆ.ಎಸ್.ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025